OS No. 35/2023

DW-2

**(ಇಂದು ದಿಃ 03-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಮುಂದುವರೆದ ಮುಖ್ಯ ವಿಚಾರಣೆಃ- ವಾದಿ ಪರ ಶ್ರೀ. ವಕೀಲರಿಂದಃ-**

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯಾಗಿ ಪ್ರತಿಜ್ಞಾ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನ್ನ ತಿಳುವಳಿಕೆಯ ಮೇರೆಗೆ ಬರೆಯಲ್ಪಟ್ಟಿರುತ್ತವೆ ಮತ್ತು ಅವು ಸತ್ಯವಾಗಿರುತ್ತವೆ. ಪ್ರತಿಜ್ಞಾ ಪತ್ರಕ್ಕೆ ಸಹಿ ಮಾಡಿರುತ್ತೇನೆ.

ದಿನಾಂಕ 20.10.2022 ರ ನೋಂದಾಯಿತ ಖರೀದಿ ಪತ್ರದ ಮೂಲ ಪ್ರತಿಯನ್ನು ನಿಡಿ-2 ಎಂದು, ದಿನಾಂಕ 25.04.2023 ರ ನೋಂದಾಯಿತ ದಾನ ಪತ್ರದ ಮೂಲ ಪ್ರತಿಯನ್ನು ನಿಡಿ-3 ಎಂದು, 4 ಕಂಪ್ಯೂಟರ್ ಪಹಣಿಗಳನ್ನು ನಿಡಿ- 4 ರಿಂದ 7 ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ಇಲ್ಲ.**

**ಪಾಟೀ ಸವಾಲುಃ- ವಾದಿ ಪರ ಶ್ರೀ.PK ವಕೀಲರಿಂದಃ-**

1ನೇ ಪ್ರತಿವಾದಿ ಮತ್ತು ಆತನ ಸಹೋದರರು ನನಗೆ ಸಂಬಂಧಿಕರು ಅಲ್ಲ. 1ನೇ ಪ್ರತಿವಾದಿಗೆ ಎಷ್ಟು ಜನ ಸಹೋದರರು ಮತ್ತು ಎಷ್ಟು ಜನ ಸಹೋದರಿಯರು ನನಗೆ ಗೊತ್ತಿಲ್ಲ. ನಾನು 4ನೇ ಪ್ರತಿವಾದಿಯಿಂದ ಜಮೀನು ಖರೀದಿ ಮಾಡಿದ್ದೇನೆ. ಖರೀದಿ ಪತ್ರದಲ್ಲಿ 4ನೇ ಪ್ರತಿವಾದಿ ಮತ್ತು ಅವರ ಸಹೋದರರು ವಿಭಾಗ ಆಗಿದ್ದಾರೆ ಎಂದು ನಮೂದು ಆಗಿದೆ. 4ನೇ ಪ್ರತಿವಾದಿ ಖರೀದಿ ಪತ್ರ ಮಾಡಿಕೋಡುವಾಗ 2010 ರಲ್ಲಿ ಅವರ ಮನೆಯಲ್ಲಿ ವಿಭಾಗ ಮಾಡಿಕೊಂಡಿದ್ದಾರೆ ಎಂದು ಹೇಳಿದರು. ಅದರಂತೆ ಖರೀದಿ ಪತ್ರದಲ್ಲಿ ನಮೂದಾಗಿದೆ ಅವರ ಕುಟುಬಂದಲ್ಲಿ ವಿಭಾಗ ಆದ ಬಗ್ಗೆ ನನಗೆ ವೆ ೖಯಕ್ತಿಕ ಮಾಹಿತಿ ಇಲ್ಲ. 1 ಮತ್ತು 2 ನೇ ಪ್ರತಿವಾದಿಯರಿಗೆ ಯಾವ ಯಾವ ಸ್ಥಳಗಳಲ್ಲಿ ಯಾವ ಯಾವ ಸರ್ವೇ ನಂಬರಗಳಲ್ಲಿ ಎಷ್ಟು ವಿಸ್ತೀರ್ಣದ ಜಮೀನುಗಳು ಇವೆ ನನಗೆ ಗೊತ್ತಿಲ್ಲ. 1 ಮತ್ತು 2 ನೇ ಪ್ರತಿವಾದಿಯರ ಕುಟುಂಬಕ್ಕೆ ಆಸ್ತಿಗಳು ಅವರ ಹಿರಿಯರಿಂದ ಬಂದಿವೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ದಾವಾ ಆಸ್ತಿಗಳು ಹಿರಿಯರು ಆಸ್ತಿಗಳು ಅಲ್ಲ ಎಂದು ಹೇಳಿದ್ದೇನೆ ಎಂದರೆ ಸರಿ. ನಾನು 2023 ರಲ್ಲಿ ನನ್ನ ಹೆಂಡತಿಯ ಹೆಸರಿಗೆ ದಾನ ಪತ್ರ ಮಾಡಿದ್ದೇನೆ. ಈ ದಾವೆ ದಾಖಲಾದ ದಿನಂಾಕ ನನಗೆ ಗೊತ್ತಿಲ್ಲ, ಈ ದಾವೆ ದಿನಾಂಕ 21.04.2023 ರಂದು ದಾಖಲಾಗಿದೆ ಎಂದರೆ ಇರಬಹುದು. ಈ ದಾವೆ ಸಲ್ಲಿಸಿದ ಸಂಗತಿ ನನಗೆ ಗೊತ್ತಾದ ತಕ್ಷಣ

OS No. 35/2023

DW-2

ದಿನಾಂಕ 25.04.2023 ರಂದದು ನನ್ನ ಹೆಂಡತಿ ಯ ಹೆಸರಿಗೆ ದಾನ ಪತ್ರ ಮಾಡಿದ್ದೇನೆ ಎಂದರೆ ಸರಿಯಲ್ಲ, ಈ ದಾವೆ ದಾಖಲಾದಾಗ ಸರ್ವೇ ನಂ .26/3 ನನ್ನ ಹೆಸರಿನಲ್ಲಿತ್ತು ಎಂದರೆ ಸರಿ .

1ನೇ ಪ್ರತಿವಾದಿ ಕುಟುಂಬದಲ್ಲಿ ಭಾಗ ಆಗದೇ ಇರುವ ಸಂಗತಿ ಗೊತ್ತಿದ್ದರು ನಾನು ಜಮೀನು ಖರೀದಿ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ, ಸರ್ವೇ ನಂ .26 ವಾದಿಯರು ಮತ್ತು 1 ರಿಂದ 6 ನೇ ಪ್ರತಿವಾದಿಯುರ ಪೀತ್ರಾರ್ಜಿತ ಮತ್ತು ಜಂಟಿ ಕಟುಂಬದ ಆಸ್ತಿಯಾಗಿರುವುದರಿಂದ ಅದರಲ್ಲಿ ಅವರೆಲ್ಲರಿಗೂ ಸಮಾನ ಭಾಗ ಇದೆ ಎಂದರೆ ಸರಿಯಲ್ಲ, ನಾನು ಈ ದಾವೆ ದಾಖಲಾದ ನಂತರ ಸರ್ವೆ ನಂ .26/3 ರ ಆಸ್ತಿಯನ್ನು ನನ್ನ ಹೆಂಡತಿ ಪರವಾಗಿ ದಾನ ಮಾಡಿರುವ ಕಾರಣ ನನ್ನ ಹೆಂಡತಿಯನ್ನು ಈ ದಾವೆಯಲ್ಲಿ ಸೇರಿಸುವ ಅವಶ್ಯಕತೆ ಇಲ್ಲ ಎಂದರೆ ಸರಿಯಲ್ಲ, ದಾನ ಪತ್ರ ಕಾನೂನು ಪ್ರಕಾರ ಅಸಿಂದು ಎಂದರೆ ಸರಿಯಲ್ಲ, ಅವರಿಗೆಲ್ಲಾ ಆಸ್ತಿಯಲ್ಲಿ ಭಾಗ ಇದೆ ಎಂದು ನನಗೆ ಗೊತ್ತಿದ್ದರು ಹೇಗಾದರು ಮಾಡಿ ಆಸ್ತಿಯನ್ನು ಉಳಿಸಿಕೊಳ್ಳಬೇಕು ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ,

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**